ಕರ್ನಾಟಕ ಸರ್ಕಾರ

# ಭ್ರಷ್ಟಾಚಾರ ನಿಗ್ರಹ ದಳ

## ಪತ್ರಿಕಾ ಪ್ರಕಟಣೆ

ದಿನಾಂಕ 03/01/2019.

ಗೌರಿಬಿದನೂರು ಟೌನ್, ಹೂವಾಡಿಗರಗಲ್ಲಿಯ ನಿವಾಸಿಯೊಬ್ಬರು ಹರ್ನಿಯಾ ಖಾಯಿಲೆಯ ಚಿಕಿತ್ಸೆಗಾಗಿ ಗೌರಿಬಿದನೂರು ಸರ್ಕಾರಿ ಆಸ್ಪತ್ರೆಯ ವೈದ್ಯರಾದ ಡಾ|| ರಮೇಶ್ ಬಾಬು ರವರ ಬಳಿ ತೋರಿಸಿ, ಅವರ ಸಲಹೆಯನ್ನು ಪಡೆದುಕೊಂಡಿದ್ದು, ಇವರಿಗೆ ಅಗತ್ಯವಿದ್ದ ಶಸ್ತ್ರ ಚಿಕಿತ್ಸೆಯನ್ನು ನಡೆಸಲು ಡಾ|| ರಮೇಶ್ ಬಾಬು ರವರು ರೂ.8,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:03/01/2019 ರಂದು ದೂರುದಾರರಿಂದ ಡಾ|| ರಮೇಶ್ ಬಾಬು ರವರು ರೂ.8,000/- ಲಂಚದ ಹಣವನ್ನು ಪಡೆದುಕೊಂಡಿದ್ದು, ಚಿಕ್ಕಬಳ್ಳಾಪುರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಆರೋಪಿಯನ್ನು ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ.